11

# ದೇವರು ದೃಷ್ಟಿಸುವ ಪರಿಪಕ್ವತೆ

## (1 ಥೆಸಲೋನೀಕ 5:12-28)

ನಾವೆಲ್ಲರು, ನಮ್ಮ ಆತ್ಮೀಕ ಪರಿಪಕ್ವತೆಯ ಕುರಿತು ಲೆಕ್ಕಾಚಾರವನ್ನು ಹೊಂದಿರುತ್ತೇವೆ. ಅದು ನಮ್ಮ ಆತ್ಮೀಕ ಜೀವನದ ಅಭಿಪ್ರಾಯವೆಂದು ತಿಳಿಯುತ್ತೇವೆ. ನಿಮ್ಮ ಆತ್ಮೀಕ ಜೀವನದ ಕುರಿತು ಯಾವ ಅಭಿಪ್ರಾಯವಿದೆ?

ನಮ್ಮಲ್ಲಿ ಕೆಲವರು ಹೊಸ ಕ್ರೈಸ್ತರಾಗಿರುವದರಿಂದ, ಅದನ್ನು ಸರಿದೂಗಲು ಸಾಧ್ಯವಿಲ್ಲ. ನಮ್ಮ ಸತ್ಯವೇದದ ಜ್ಞಾನವು ಮತ್ತು ಕ್ರೈಸ್ತ ಸೇವೆಯು ಭವಿಷ್ಯಕ್ಕೆ ನೇಮಕವಾಗಿರುವದು ಎಂದು ತಿಳಿಯುತ್ತೇವೆ. ನಮ್ಮಲ್ಲಿ ವೃದ್ಧಿಯ ಕೊರತೆ ಇರುವದರಿಂದ ಮತ್ತು ಆತ್ಮೀಕ ಜೀವಿತವನ್ನು ಸರಿದೂಗಲು ಸಾಧ್ಯವಿಲ್ಲದೆ ಇರುವುದರಿಂದ, ಬೇಸರ ಪಟ್ಟುಕೊಳ್ಳುತ್ತೇವೆ. ನಾವು ಬೆಳೆದು ವೃದ್ಧಿಯಾಗಲು ಪ್ರಯತ್ನಿಸಿದ್ದರೂ, ಪರಿಪಕ್ವತೆಯಿಂದ ಬಹಳ ದೂರ ಉಳಿದಿದ್ದೇವೆ.

ನಮ್ಮಲ್ಲಿ ಕೆಲವರು ಕ್ರೈಸ್ತರಾಗಿ ಬಹಳ ಕಾಲವಾಗಿದ್ದು, ಅನೇಕ ಬೋಧನೆಗಳನ್ನು ಅರಿತಿರುವದರಿಂದ, ಹೆಚ್ಚಿನ ಸವಾಲುಗಳು ನಮಗೆ ಇರುವದಿಲ್ಲವೆಂದು ಭಾವಿಸುತ್ತೇವೆ. ಇತರರಾದ ನಾವು ಒಳ್ಳೆಯ ಕಾರ್ಯಮಾಡುತ್ತಿರುವದರಿಂದ ಪರಿಪಕ್ವತೆಗೆ ಬಂದಿರುವೆವು ಎಂದು ತಿಳಿಯುತ್ತೇವೆ. ನಾವು ದೇವರ ಕಾರ್ಯದಲ್ಲಿ ನಿರತರಾಗಿ, ಇತರರಿಗಿಂತಲೂ ಹೆಚ್ಚಿನ ಕಾರ್ಯವನ್ನು ಮಾಡುತ್ತಿರುವೆವು ಎಂದು ಹೇಳಿರುತ್ತಾರೆ.

ದೇವರು ಯಾವ ವಿಧವಾದ ವೃದ್ಧಿಯನ್ನು ನೋಡುತ್ತಾನೆ? 1 ಥೆಸಲೊನೀಕದ ಕಡೆಯ ಭಾಗದಲ್ಲಿ, "ಮಾಡು" ಅಥವಾ "ಮಾಡಬಾರದು" ಎಂದು ಹೇಳುವ ಸರಳವಾದ ಪಟ್ಟಿಯನ್ನು ನೋಡುತ್ತೇವೆ. ಮಾರ್ಗದರ್ಶನಕ್ಕೆ ಅದು ಸತ್ಯವಾದ ಭಾಗವಾಗಿರುತ್ತದೆ; ಕ್ರೈಸ್ತ ಪರಿಪಕ್ವತೆಯ ಜೀವಿತಕ್ಕೆ ಚಟುವಟಿಕೆಗಳನ್ನು ಮತ್ತು ಮನೋಭಾವವನ್ನು ನೀಡುತ್ತದೆ. ಪರಿಪಕ್ವತೆಗೆ ದೇವರು ನೀಡಿರುವ ಮಾರ್ಗದರ್ಶನಗಳೇನು?

### ಸಂಬಂಧಗಳಲ್ಲಿ ಪರಿಪಕ್ವತೆಯನ್ನು ಹೊಂದಿಕೊಳ್ಳಿರಿ (5:12-15)

ಕ್ರೈಸ್ತತ್ವವು ಸಂಬಂಧವಾಗಿರುತ್ತದೆ. ಯೇಸು ಕ್ರಿಸ್ತನ ಮೂಲಕ ತಂದೆಯೊಂದಿಗಿನ ಸ್ನೇಹವಾಗಿರುತ್ತದೆ. ಆತನ ಸಂಗಡದ ಮೂಲಕ ಇತರರೊಂದಿಗೆ ನಾವು ಸಂಬಂಧವನ್ನು ಹೊಂದಬೇಕೆಂದು ದೇವರು ಯೋಚಿಸಿದ್ದಾನೆ.

"ಆದದ್ದರಿಂದ ದೇವರ ಪ್ರಿಯರಾದ ಮಕ್ಕಳಿಗೆ ತಕ್ಕ ಹಾಗೆ, ಆತನನ್ನು ಅನುಸರಿಸುವವ ರಾಗಿರ್ರಿ" ಎಫೆಸ 5:1. ಕರುಣೆ, ಪ್ರೀತಿ, ಮತ್ತು ಕ್ಷಮಾಪಣೆಯ ಕುರಿತಾಗಿ ಈ ವಾಕ್ಯಭಾಗದಲ್ಲಿ ತಿಳಿಸಿರುವಂಥದ್ದು, ನಮಗೆ ಜೀವಿತದ ನಿಯಮಗಳಾಗಿವೆ. ಯೇಸುವಿನ ಯಜ್ಞದ ಮೂಲಕ ಇದನ್ನು ದೃಷ್ಟಾಂತರಿಸಲಾಗಿದೆ, ಇದು ಈ ಸದ್ಗುಣಗಳ ಪರಿಣಾಮವಾಗಿರುತ್ತದೆ.

ದೇವರು ಈ ರೀತಿ ಇರುವನು, ಕರುಣೆವುಳ್ಳವನು, ಪ್ರೀತಿಸುವವನು ಮತ್ತು ಕ್ಷಮಿಸುವವನು ಆ ಸದ್ಗುಣಗಳನ್ನು ಯೇಸುವಿನಲ್ಲಿ ಪ್ರಕಟಿಸಿರುವನು ಅದು ನಮ್ಮ ಲಾಭಕ್ಕಾಗಿಯೇ, ನಾವು ಈ ವಿಷಯದಲ್ಲಿ ದೇವರನ್ನೆ ಅನುಕರಿಸಬೇಕು.

ನಮ್ಮ ಸಂಬಂಧಗಳಲ್ಲಿ ದೇವರ ಸದ್ಗುಣಗಳನ್ನು ಹೇಗೆ ಪ್ರಕಟ ಪಡಿಸುತ್ತೇವೆ? ಈ ಕೆಳಗಿನ 5:12-15 ವಾಕ್ಯವನ್ನು ಗಮನಿಸಿ:

ಸಹೋದರರೇ, ಯಾರು ನಿಮ್ಮಲ್ಲಿ ಪ್ರಯಾಸಪಟ್ಟು; ಕರ್ತನ ಕಾರ್ಯಗಳಲ್ಲಿ ನಿಮ್ಮ ಮೇಲೆ ಮುಖ್ಯಸ್ಥರಾಗಿದ್ದು ನಿಮಗೆ ಬುದ್ಧಿ ಹೇಳುತ್ತಾರೋ ಅವರನ್ನು ಲಕ್ಷಿಸಿ ಅವರ ಕೆಲಸದ ನಿಮಿತ್ತ ಅವರನ್ನು ಪ್ರೀತಿಯಿಂದ ಬಹಳವಾಗಿ ಸನ್ಮಾನಮಾಡಬೇಕೆಂದು ನಿಮ್ಮನ್ನು ಬೇಡಿಕೊಳ್ಳುತ್ತೇವೆ. ನಿಮ್ಮ ನಿಮ್ಮೊಳಗೆ ಸಮಧಾನವಾಗಿರಿ. ಸಹೋದರರೇ, ಆಕ್ರಮವಾಗಿ ನಡೆಯುವವರಿಗೆ ಬುದ್ಧಿ ಹೇಳಿರಿ, ಮನಗುಂದಿದವರನ್ನು ಧೈರ್ಯಪಡಿಸಿರಿ, ಬಲಹೀನರಿಗೆ ಆಧಾರವಾಗಿರಿ, ಎಲ್ಲರಲ್ಲಿಯೂ ದೀರ್ಘಶಾಂತರಾಗಿರಿ ಎಂದು ನಿಮ್ಮನ್ನು ಪ್ರಬೋಧಿಸುತ್ತೇವೆ. ಯಾರೂ ಅಪಕಾರಕ್ಕೆ ಅಪಕಾರಮಾಡದಂತೆ ನೋಡಿಕೊಳ್ಳಿರಿ; ಯಾವಾಗಲೂ ನೀವು ಒಬ್ಬರಿಗೊಬ್ಬರು ಹಿತವನ್ನು ಮಾಡಿಕೊಂಡಿರುವದಲ್ಲದೆ ಎಲ್ಲರಿಗೂ ಹಿತವನ್ನು ಮಾಡುವವರಾಗಿರಿ.

ನಾಯಕರುಗಳಿಗೆ ಮಾನ ಮತ್ತು ಗೌರವವನ್ನು ಸಲ್ಲಿಸಿರಿ. ಸಮಾಧಾನ ಪಡಿಸುವವರಾಗಿರಿ. ಸೋಮಾರಿ ಹಾಗೂ ತೊಡಕು ಉಂಟುಮಾಡುವವರನ್ನು ಎಚ್ಚರಿಸಿರಿ. ಭಯಗ್ರಸ್ತರನ್ನು ಸಂತೈಸಿರಿ, ಬಲಹೀನರಿಗೆ ಸಹಾಯಿಸಿ. ಈ ಚಟುವಟಿಕೆಗಳ ಮೂಲಕ, ಕೆಲವು ಯಶಸ್ವಿಯನ್ನು ಕೆಲವು ಸೋಲನ್ನು ನೋಡುತ್ತೇವೆ. ಪ್ರತಿಯೊಬ್ಬರಿಗೂ ತಾಳ್ಮೆಯನ್ನು ತೋರಿಸಿರಿ. ಕೆಲವು ಸಾರಿ ಜನರು ನಮ್ಮನ್ನು ಒಪ್ಪುವರು, ಅಥವಾ ತಿರಸ್ಕರಿಸುವರು. ನಮ್ಮ ಒಳ್ಳೆಯ ಕಾರ್ಯಕ್ಕೆ ಕೆಲವರು ಕೆಟ್ಟದ್ದನ್ನೇ ಹಿಂದಿರುಗಿಸುವರು. ಅವರ ಮೇಲೆ ಮುಯ್ಯಿತೀರಿಸಬೇಡಿರಿ. ಒಳ್ಳೆಯದನ್ನೆ ಮಾಡುವದರಲ್ಲಿ ಮುಂದಾಗಿರಿ.

ನಮಗೆ ತಿಳಿದಿರುವಂತೆ - ಕೆಲವು ನಾಯಕರುಗಳು - ಸೋಮಾರಿಗಳಾಗಿದ್ದು ಇತರರಿಗೆ ಅಡ್ಡಿ ಉಂಟು ಮಾಡುತ್ತಾರೆ. ಭಯಪಡುವವರನ್ನು ಮತ್ತು ಬಲಹೀನ ಜನರನ್ನು ನಾವು ನೋಡಿರುತ್ತೇವೆ, ಅಂಥವರನ್ನು ದೇವರ ನಿಯಮದಿಂದ ಎದುರಿಸಿರಿ. ಈ ಎಲ್ಲಾ ಸಂಗತಿಗಳಿಗೆ ಒಳ್ಳೆಯದನ್ನೆ ಮಾಡಿರಿ, ವೃದ್ಧಿಯಾಗುವಂತೆ, ಸಮಾಧಾನದ ಹಾಗೂ ಪ್ರೀತಿಯ ಮಾರ್ಗೋಪಾಯಗಳನ್ನು ಮಾಡಿರಿ: ಇದು ಪರಿಪಕ್ವತೆಯಾಗಿದೆ.

ಇದು ಅಗತ್ಯವುಳ್ಳ ಬೆಲೆಬಾಳುವ ಕೆಲಸವಾಗಿದೆ. ಇದು ಕ್ರೈಸ್ತ ಆಚರಣೆಯ ಪರಿಪಕ್ವತೆ ಇದು ದೇವರ ಕೆಲಸವಾಗಿದೆ! ಈ ಕೆಲಸವನ್ನೇ ಯೇಸು ಸಹ ಮಾಡಿದನು, ಅದು ಪೂರ್ಣವಾಗುವವರೆಗೆ, ತಾಳ್ಮೆಯಿಂದ ಕೆಲಸಮಾಡಿದನು. ಯೇಸು "ಒಳ್ಳೆದನ್ನು ಮಾಡುತ್ತಾ ಸಂಚರಿಸಿದನು, ..." (ಅಪೊಸ್ತಲರ ಕೃತ್ಯ 10:38). ಒಳ್ಳೆಯದನ್ನು ಮಾಡುವ ಸಂಬಂಧದಲ್ಲಿ ಪರಿಪಕ್ವತೆಯನ್ನು ಉಂಟುಮಾಡುತ್ತದೆ.

ಇತರರೊಂದಿಗಿನ ನಮ್ಮ ಸಂಬಂಧಗಳನ್ನು ಪರಿಶೀಲನೆ ಮಾಡುವಾಗ, ಏನನ್ನು ಗಮನಿಸುತ್ತೇವೆ? ನಾವು ಚಿಂತನೆಮಾಡದೆ ದೂರ ಉಳಿಯುತ್ತೇವೆಯೇ? ಅವರ ಅಗತ್ಯಗಳಿಗೆ ತಾರತಮ್ಯ ಮಾಡುತ್ತೇವೆಯೇ? ನಾವು ಕೇವಲ ಆಸಕ್ತಿ ತೋರಿ, ಆಶ್ಚರ್ಯ ಪಡುತ್ತೇವೆಯೋ? ಅಥವಾ ಇತರರ ಮೇಲೆ ಅಧಿಕಾರ ತೋರಿ, ಅವರು ಕಾರ್ಯಗಳನ್ನು ಮಾಡಲು, ಆದೇಶ ನೀಡುತ್ತೇವೆಯೇ? ಇದು ಕ್ರೈಸ್ತ ಪರಿಪಕ್ವತೆಯ ಜೀವಿತವಾಗಿರುವದಿಲ್ಲ.

ನಮ್ಮ ವರ್ತನೆಯು ಈ ರೀತಿ ಇದ್ದರೆ, ಅಥವಾ ಶೋಧನೆಯಿಂದ ವರ್ತನೆಯನ್ನು ಹೊಂದಿದ್ದರೆ (ಅದರಲ್ಲಿ ನಾವೆಲ್ಲರು ಸೇರಿದ್ದೇವೆ) ಹಾಗಾದರೆ ನಾವು ದೇವರ ನಿಯಮಗಳನ್ನು ಪದೇ ಪದೇ ಓದಿ ಇತರರೊಂದಿಗೆ ವರ್ತಿಸಬೇಕು.

## ವೈಯಕ್ತಿಕ ಜೀವಿತದಲ್ಲಿ ಪರಿಪಕ್ವತೆಯನ್ನು ಹೊಂದಿಕೊಳ್ಳಿರಿ (5:16-22)

ನಮ್ಮಿಂದ ಇತರರಿಗೆ ಸಹಾಯ ಮಾಡುವ ವಿಷಯವನ್ನೇ ದೇವರು ಬಯಸುವನು, ಮತ್ತು ಅದು ನಮಗೆ ಪ್ರಾಮುಖ್ಯವಾದ ಕೆಲಸವಾಗಿದೆ. ಅದು ವೇದನೆವುಳ್ಳದ್ದು ಮತ್ತು ಆಯಾಸಗೊಳಿಸುವದು ಆಗಿದೆ. ಒಂದು ವೇಳೆ ಅದು ನಮ್ಮ ಆತ್ಮದ ಸಾಮರ್ಥ್ಯವನ್ನು ಕುಂದಿಸಬಹದು, ಆದ್ದರಿಂದ ನಾವು ವೃದ್ಧಿಯಾಗುವದನ್ನು ದೃಢಪಡಿಸಿಕೊಳ್ಳಬೇಕು,

ಇದರಿಂದ ನಾವು ಇತರರಿಗೆ ಸಹಾಯಿಸಲು ಸಾಧ್ಯವಾಗುತ್ತದೆ. ಇದನ್ನು ಉತ್ತಮವಾಗಿ ಮಾಡಲು, ನಮ್ಮ ವೈಯಕ್ತಿಕವಾದ ಪರಿಪಕ್ವತೆಗೆ ಆದ್ಯತೆ ನೀಡಬೇಕು.

ಅದನ್ನು ಹೇಗೆ ಮಾಡೋಣ? ಈ ಪ್ರಶ್ನೆಗೆ ಉತ್ತರವನ್ನು ಈ ಕೆಳಗೆ ನೀಡಲಾಗಿದೆ:

> ಯಾವಾಗಲೂ ಸಂತೋಷಿಸಿರಿ; ಎಡೆಬಿಡದೆ ಪ್ರಾರ್ಥನೆಮಾಡಿರಿ; ಎಲ್ಲಾದರಲ್ಲಿಯೂ ಕೃತಜ್ಞತಾಸ್ತುತಿಮಾಡಿರಿ; ಇದೇ ನಿಮ್ಮ ವಿಷಯವಾಗಿ ಕ್ರಿಸ್ತ ಯೇಸುವಿನಲ್ಲಿ ತೋರಿಬಂದ ದೇವರ ಚಿತ್ತ. ಪವಿತ್ರಾತ್ಮವನ್ನು ನಂದಿಸಬೇಡಿರಿ; ಪ್ರವಾದನೆಗಳನ್ನು ಹೀನೈಸಬೇಡಿರಿ; ಆದರೆ ಎಲ್ಲವನ್ನೂ ಪರಿಶೋಧಿಸಿ ಒಳ್ಳೇದನ್ನೇ ಭದ್ರವಾಗಿ ಹಿಡಿದುಕೊಳ್ಳಿರಿ; ಸಕಲವಿಧವಾದ ಕೆಟ್ಟತನಕ್ಕೆ ದೂರವಾಗಿರಿ (5:16-22).

ಯಾವ ವಿಷಯವು ಆದೇಶದ ಪಟ್ಟಿಯಂತಿರುತ್ತದೋ, ಅದು ಭಕ್ತಿ ಸಂಜೀವನಕ್ಕೆ ದೇವರು ನೀಡಿರುವ ತಯಾರಿಯ ಪಟ್ಟಿಯಾಗಿರುತ್ತದೆ, ಅದು ವೈಯಕ್ತಿಕ ಜೀವಿತದ ಪುನಃ ನಿರ್ಮಾಣವಾಗಿರುತ್ತದೆ. ಈ ಚಟುವಟಿಕೆಗಳು ಕ್ರೈಸ್ತರನ್ನು ಉತ್ತೇಜಿಸಿ ಪರಿಪಕ್ವತೆಯ ಕಡೆಗೆ ವೃದ್ಧಿಯನ್ನು ಉಂಟುಮಾಡುತ್ತದೆ.

ಈ ಚಟುವಟಿಕೆಗಳಲ್ಲಿ ಪಾಲುಗಾರರಾಗುವಾಗ, ನಮ್ಮ ಜೀವಿತದಲ್ಲಿ ಏನು ಸಂಭವಿಸುತ್ತದೆ? ನಾವು ಸಂತೋಷಿಸುತ್ತೇವೆ; ನಾವು ಪ್ರಾರ್ಥಿಸುತ್ತೇವೆ; ನಮ್ಮನ್ನು ಬದಲಾಯಿಸು ಎಂದು ಆತನನ್ನು ಕೇಳಿಕೊಳ್ಳುತ್ತೇವೆ. ನಾವು ದೇವರ ವಾಕ್ಯವನ್ನು ಅವಲಂಭಿಸುತ್ತೇವೆ, ದೈವ ಭಕ್ತಿಗೆ ಅನುಕೂಲವಾದದ್ದನ್ನು ಕೂಡಿಟ್ಟುಕೊಳ್ಳುತ್ತೇವೆ. ಈ ಮನೋಭಾವವು ಮತ್ತು ಚಟುವಟಿಕೆಗಳು ದೇವರು ನಮ್ಮಿಂದ ಬಯಸುವ ಪ್ರೀತಿ, ಕ್ಷಮಾಪಣೆ ಹಾಗೂ ತಾಳ್ಮೆಗೆ ನಡಿಸುತ್ತದೆ.

ಈ ಚಟುವಟಿಕೆಗಳನ್ನು ನಿಮ್ಮ ಜೀವಿತದ ಭಾಗವನ್ನಾಗಿ ಹೇಗೆ ಮಾಡಬಹುದು? ಅದನ್ನು ಅಪರೂಪವಾಗಿ ಮಾಡುವದಲ್ಲ? ಮೊದಲನೆಯದಾಗಿ, ಅದು ನಿಮಗೆ ಪ್ರಮುಖವಾದದ್ದು ಎಂದು ಮನವರಿಕೆಮಾಡಿಕೊಳ್ಳಬೇಕು, ಅದು ವೃದ್ಧಿಗೆ ಅಗತ್ಯ ಎಂದು ತಿಳಿಯಬೇಕು. ಆ ವಿಧವಾಗಿ ಯಾರು ಹೇಳುವರು? ದೇವರೇ ಅದನ್ನು ಹೇಳುವನು! ಎರಡನೆಯದಾಗಿ, ಅದನ್ನು ಕಾರ್ಯರೂಪಕ್ಕೆ ತನ್ನಿ. ಅಂತಹ ಆರಂಭವನ್ನು ಮಾಡದೆ ಇರಲು ಬಹಶಃ ಕಾರಣಗಳು ಇರಬಹುದು. ಅದನ್ನು ನೀವು ಪ್ರಾರಂಭಿಸದ ಹೊರತು, ಈ ಸುದ್ಗುಣಗಳು ನಿಮ್ಮ ದಿನನಿತ್ಯ ಜೀವಿತದ ಅಂಗವಾಗಿರುವದಿಲ್ಲ ಆದ್ದರಿಂದ ಪ್ರಾರಂಭಿಸಿ, ಒಳ್ಳೆಯ ಕಾರ್ಯವನ್ನು ಮಾಡಲು ಮುಂದುವರಿಯಿರಿ. ಅದಕ್ಕಾಗಿ ಯೋಜನೆಯನ್ನು ಮಾಡಿಕೊಳ್ಳಿ, ಅದಕ್ಕಾಗಿ ಸಮಯವನ್ನು ನೀಡಿರಿ. ನೀವು ಅದನ್ನು ಮರೆತು ಅಲಕ್ಷ್ಯಮಾಡುವದಾದರೆ, ಆ ಮಾರ್ಗಕ್ಕೆ ಚಲಿಸುವದಕ್ಕೆ ಪ್ರಯತ್ನಿಸಿರಿ.

## ದೇವರ ಸಹಾಯವನ್ನು ಸ್ವೀಕರಿಸಲು ತೆರೆದ ಮನದವರಾಗಿರ್ರಿ (5:23)

ಪರಿಪಕ್ವತೆಯ ಜೀವಿತವನ್ನು ಜೀವಿಸಲು ಪ್ರಯತ್ನಿಸುವಾಗ, ನಮ್ಮ ಬಲಹೀನತೆಯ ಕುರಿತು ಅರಿತವರಾಗುತ್ತೇವೆ. ನಮ್ಮ ಸೋಲುಗಳನ್ನು ತಿಳಿಯುತ್ತೇವೆ. ಕೆಲವು ಸಾರಿ ದೇವರ ಬಯಕೆಗಳನ್ನು ಅಲಕ್ಷಿಸಿ, ಅದಕ್ಕೆ ಪ್ರತಿರೋಧ ವ್ಯಕ್ತಪಡಿಸುತ್ತೇವೆ. ನಮ್ಮನ್ನು ನಾವು ಅವಲಂಭಿಸಿದರೆ ನಿಶ್ಚಯವಾಗಿ ಸೋಲುತ್ತೇವೆ. ಯೇಸುವಿನ ಮೂಲಕ ದೇವರಲ್ಲಿ ಮಾತ್ರ ಪರಿಪೂರ್ಣತೆಯನ್ನು ಕಾಣುತ್ತೇವೆ. ಪರಿಪಕ್ವತೆಗೆ ಹೋಗುವಂತ ಸವಾಲನ್ನು ದೇವರೇ ನೀಡುವನು (5:23).

ದೇವರು ಮಾತ್ರ ನಮ್ಮನ್ನು ಪೂರ್ಣ ಮಾಡುವನು. ಆ ಶಕ್ತಿ ಆತನಲ್ಲಿ ಮಾತ್ರ ಇರುತ್ತದೆ. ನಾವು ಮಾಡುವದನ್ನೆಲ್ಲಾ ಮಾಡಿದ ನಂತರವೂ, ದೇವರನ್ನೇ ಅವಲಂಭಿಸಬೇಕು. ನಮ್ಮ ಸಾಧನೆಗಳನ್ನು ಮಾತ್ರ ಗೌರವಿಸಿ, ಇತರರನ್ನು ಟೀಕೆ ಮಾಡುವದು ದೊಡ್ಡ ಶೋಧನೆಯಾಗಿರುತ್ತದೆ. ಲೂಕ 18:11, 12ರಲ್ಲಿ ಫರಿಸಾಯನು ಒಳ್ಳೆಯ ಕೆಲಸ

ಮಾಡಿದ್ದಾಗ್ಯೂ ದೇವರನ್ನು ಅವಂಭಿಸುವದನ್ನು ಮರೆತುಬಿಟ್ಟನು. ಅವನು ಕಷ್ಟಪಟ್ಟು ಕೆಲಸ ಮಾಡುವವನಾದರೂ, ತನ್ನ ಧಾರ್ಮಿಕ ಪಾಪಕ್ಕೆ ದೇವರ ಸಹಾಯವು ಅಗತ್ಯ ಎಂದು ತಿಳಿಯಲಿಲ್ಲ. ಲೂಕ 18:13ರಲ್ಲಿ ಸಂಕದವನು ದೇವರನ್ನು ಅವಲಂಭಿಸಿದರಿಂದ, ದೇವರು ಅವನಿಗೆ ಸಹಾಯಿಸಲು ಸಂತೋಷಪಟ್ಟನು.

ದೇವರು ಉದಾರಿಯಾಗಿರುವದರಿಂದ, ತನ್ನ ಜೀವಿತವನ್ನು ಮತ್ತು ಪರಿಶುದ್ಧತೆಯನ್ನು ನಮ್ಮೊಂದಿಗೆ ಹಂಚಿಕೊಳ್ಳುವನು. ಯೇಸುವಿನ ಮುಖಾಂತರ ಇದನ್ನು ಸಾಧ್ಯ ಮಾಡಿರುವನು. ವೃದ್ಧಿಯಾದ ಕ್ರೈಸ್ತರಾಗಿರುವದರಿಂದ, ಎಲ್ಲದರಲ್ಲೂ ದೇವರ ಸಹಾಯವನ್ನು ಅವಲಂಭಿಸುತ್ತೇವೆ. ದೇವರು ನಮ್ಮ ಈ ಜೀವಿತವನ್ನು ಮತ್ತು ನಿತ್ಯವಾದ ಜೀವಿತವನ್ನು ಮುಂದುವರಿಸುವನು. ನಾವು ದೇವರನ್ನು ಅವಲಂಭಿಸಬಹುದು. ನಾವು ದೇವರನ್ನು ಅವಲಂಭಿಸಲೇಬೇಕು.

## ಮುಕ್ತಾಯ

ನಮ್ಮ ಸಮೀಪಸ್ತರಾದ ಕ್ರೈಸ್ತರನ್ನು ಹೇಗೆ ಬೀಳ್ಕೊಡೋಣ? ಬೀಳ್ಕೊಡುವಂತ ಬೆಲೆಯುಳ್ಳ ಉತ್ತೇಜನವನ್ನು ಹೇಗೆ ನೀಡೋಣ? 1 ಥೆಸಲೊನೀಕದ ಅಂತ್ಯದಲ್ಲಿ ಇದಕ್ಕೆ ಉತ್ತರವಿದೆ. ಸಹೋದರರ ಪ್ರಾರ್ಥನೆಗಾಗಿ ಮನವಿ ಮಾಡಿರಿ. ಪ್ರೀತಿಪೂರ್ವಕವಾಗಿ ಪರಸ್ಪರ ವಂದಿಸುವಂತೆ ಮನವಿ ಮಾಡಿರಿ. ದೇವರ ವಾಕ್ಯದ ಸತ್ಯವನ್ನು ಓದಿ ಅರಿಯುವಂತೆ ತಿಳಿಸಿರಿ. ದೇವರ ಕನಿಕರವು ಅವರೊಂದಿಗೆ ಯಾವಾಗಲೂ ಇರಲಿ ಎಂದು ಆಶಿಸಿರಿ (5:25-28).

ನಮ್ಮ ಸಹೋದರರಿಂದ ಬೀಳ್ಕೊಡಲ್ಪಡುವದು ಎಂಥಾ ಮಹತ್ವದ ವಿಷಯ, ಅವರನ್ನು ಒಂದು ವಾರಕ್ಕೆ ಅಥವಾ, ಒಂದು ವರುಷದ ಕಾಲ ಬಿಟ್ಟಿರಬಹುದು. ಇದುವೇ ದೇವರ ಮಾರ್ಗ, ಹಾಗೆಯೇ ಉತ್ತಮವಾದ ಮಾರ್ಗಕ್ಕೆ ಪ್ರಮಾಣ ದೃಷ್ಟಾಂತ.

ಇದು ಪರಿಪಕ್ವತೆಯ ಪ್ರಕಟನೆ ಹೃದಯದ ಹಾಗೂ ಮನಸ್ಸಿನ ಚಿತ್ತದ ಕ್ರೈಸ್ತ ಪರಿಪಕ್ವತೆಯು ಈ ಮುಂದಿನಂತಿರುತ್ತದೆ. ನಮ್ಮ ನಡೆ ನುಡಿಯಲ್ಲಿ ದೇವರ ಬಲವು ಇರುತ್ತದೆ. ನಾವು ಪರಿಪಕ್ವತೆಗಾಗಿ ಶ್ರಮಿಸುತ್ತಿದ್ದರೆ, ಅದರ ಪರಿಣಾಮವು ನಮ್ಮೊಳಗೆ ಮಾತ್ರ ಇರದೆ, ಅದು ನಮ್ಮ ಸುತ್ತಲೂ ಇರುತ್ತದೆ, ನಾವು ಸ್ಪರ್ಷಿಸುವ ಜನರಲ್ಲೂ ಗೋಚರಿಸುತ್ತದೆ. ನಮ್ಮಲ್ಲಿ ವ್ಯತ್ಯಾಸವು ಗೋಚರಿಸುತ್ತದೆ. ನಾವು ದೇವ ಜನರೆಂದು ಪ್ರಕಟವಾಗುತ್ತದೆ. ದೇವರ ಮಾರ್ಗವನ್ನು ಅನುಸರಿಸಿ ದೇವರನ್ನು ಹಿಂಬಾಲಿಸಿರಿ. ದೇವರು ನಿಮ್ಮೊಂದಿಗಿರುವಾಗ, ನೀವು ಈ ಜೀವಿತದಲ್ಲಿ ಪೂರ್ಣರಾಗಿ, ಮುಂದಿನ ಜೀವಿತದಲ್ಲಿ ಆತನ ಅನ್ಯೋನ್ಯತೆಯಲ್ಲಿ ಪಾಲುಗಾರರಾಗುವಿರಿ.